# ದಿನಾಂಕ–21/11/2020ರಂದು ಬೆಳಗ್ಗೆ 11 ಘಂಟೆಗೆ ವಾರ್ಡ್ ಸಂಖ್ಯೆ 38 ಹೆಚ್.ಎಮ್.ಟಿ. ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮೀತಿ ಸಭೆಯ ನಡುವಳಿಗಳು

ಹಾಜರಿದ್ದ ಅಧಿಕಾರಿಗಳು:

1. ಹೆಚ್.ಭೀಮೇಶ್, ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆಬಿಬಿಎಂಪಿ ಹಾಗೂ ವಾ.38ರನೋಡಲ್ ಅಧಿಕಾರಿಗಳು)
2. ಬಿ.ಎನ್.ಲಕ್ಷ್ಮೀಶ್ ಗೌಡ,ಸಹಾಯಕ ಅಭಿಯಂತರರು(ವಾರ್ಡ್ ನಂ.38) ಮತ್ತು ಸಂಚಾಲಕರು
3. ನಾರಾಯಣ್ ಹಿರಿಯ ಆರೋಗ್ಯ ಪರಿವೀಕ್ಷಕರು,(ವಾರ್ಡ್ ನಂ.38)
4. ತನುಜಾ, ಕಿರಿಯ ಆರೋಗ್ಯ ಪರಿವೀಕ್ಷಕರು,(ವಾರ್ಡ್ ನಂ.38)
5. ತಿರುಪಾಲ್, ಕಂದಾಯ ಪರಿವೀಕ್ಷಕರು, ಹೆಚ್.ಎಂ.ಟಿ.ವಾರ್ಡ್ ನಂ.38
6. ಡಾ॥ ಜಿ.ಎಂ. ರೇಣುಕಾ ಪ್ರಸಾದ್, ಎಂ.ಓ., ನಂದಿನಿ ಬಡಾವಣೆ.
7. ಬೈಲವೆಂಕಟಪ್ಪ ಹೆಡ್ ಗ್ಯಾಂಗ್ ಮ್ಯಾನ್ ಹೆಚ್.ಎಂ.ಟಿ.ವಾರ್ಡ್ ನಂ.38
8. ಮೋಹಿನಿ, ಲಿಂಕ್ ವರ್ಕರ್ ವಾರ್ಡ್ ನಂ.38
9. ಭಾರತಿ, ಲಿಂಕ್ ವರ್ಕರ್ ವಾರ್ಡ್ ನಂ.38
10. ಆಂಟೋಣಿ ಜಾರ್ಜ್ ಕಿರಿಯ ಅಭಿಯಂತರರು(ಬೆಸ್ಕಾಂ)
11. ಎಲ್. ವಿಜಯ ಕುಮಾರ್, ಕಂದಾಯ ಪರಿವೀಕ್ಷಕರು, ಹೆಚ್.ಎಂ.ಟಿ.ವಾರ್ಡ್ ನಂ.38
12. ಕೀರ್ತಿ ಪ್ರಸಾದ್ ಕಂದಾಯ ವಸೂಲೀಗಾರರು ವಾರ್ಡ್ ನಂ.38
13. ಹನುಮಂತರಾಯ ಆರಕ್ಷಕ ನಿರಿಕ್ಷಕರು ಆರ್.ಎಂ.ಸಿ. ಯಾರ್ಡ್ ಪೋಲೀಸ್ ಠಾಣೆ

ಮೇಲೆ ಹಾಜರಿದ್ದ ಅಧಿಕಾರಿಗಲು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 38 ರ ಕಾರ್ಯದರ್ಶಿಗಲು ಹಾಗೂ ಸಹಾಯಕ ಅಭಿಯಂತರರು ರವರು ಸಭೆಯನ್ನುದ್ದೇಶಿಸಿ ಮಾತನಾಡುತಾ.

ಶ್ರೀ ಜಾರ್ಜ್ ಕಿರಿಯ ಅಭಿಯಂತರರು(ಬೆಸ್ಕಾಂ)ರವರು ಮಾತನಾಡಿ ಬೀದಿದೀಪಗಳನ್ನು ಡೈರೆಕ್ಟ್ ಮೀಟರಿಂಗ್ ಮಾಡುತ್ತಿದ್ದು ಇದರ ಬಗ್ಗೆ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿಗಳಿಗೆ ಕೇಳಿಕೊಂಡರು ಇದನ್ನು ನೋಡಲ್ ಅಧಿಕಾರಿಗಳು ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೀದಿದೀಪಗಳು) ಅವರೊಂದಿಗೆ ಮಾತನಾಡಿ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ಶ್ರೀಮತಿ ತನುಜಾ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ವಾರ್ಡಿನಲ್ಲಿ ಕೇವಲ 65 ಪೌರ ಕಾರ್ಮಿಕರಿದ್ದು 25 ಪೌರ ಕಾರ್ಮಿಕರನ್ನು ಕಸ ಗುಡಿಸುವಿಕೆಗಾಗಿ ಬಳಕೆ ಮಾಡಿಕೊಂಡು ಹೆಚ್ಚಿನ ಪೌರ ಕಾರ್ಮಿಕರು ಬೇಕಾಗಿರುವುದರಿಂದ ನೋಡಲ್ ಅಧಿಕಾರಿಗಳೊಂದಿಗೆ ಮಾತನಾಡಿ ಈ ಕೂಡಲೇ ಕ್ರಮ ಕೈಗೊಳ್ಳಲು ಮನವೀ ಮಾಡಿಕೊಂಡರು.

ಶ್ರೀ ಲಕ್ಷ್ಮೀಗೌಡ ಸಹಾಯಕ ಅಭಿಯಂತರರು ರವರು ಮಾತನಾಡಿ ಬೀದಿದೀಪಗಳ ದೂರು ಬರುತ್ತಿದ್ದು ಇದನ್ನು ಬೀದಿದೀಪಗಳ ತಪಾಸಣೆಗೆ ಬೀದಿದೀಪಗಳ ಪರಿವೀಕ್ಷಕರ ಜೊತೆ ಮಾತನಾಡಿ ಈ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

ಹಾಗೂ ವಾರ್ಡಿನಲ್ಲಿ ಹಸಿ ಮತ್ತು ಒಣ ಕಸದ ಸಮಸ್ಯೆ ಬಗ್ಗೆ ಮಾತನಾಡಿ ನೋಡಲ್ ಅಧಿಕಾರಿಗಳು ಸಂಬಂಧ ಪಟ್ಟ ಗಿತ್ತಿಗೆದಾರರ ಜೊತೆ ಮಾತನಾಡಿ ಈ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ಮೆಲಿನ ವಿಷಯಗಳ ಬಗ್ಗೆ ಶ್ರೀ.ಹೆಚ್.ಭೀಮೇಶ್, ಕಾರ್ಯಪಲಕ ಅಭಿಯಂತರರು(ಘನತ್ಯಾಜ್ಯ ನಿರ್ವಹಣೆ ಬಿಬಿಎಂಪಿ ಹಾಗೂ ವಾರ್ಡ್ ನಂ38 ನೋಡೆಲ್ ಅಧಿಕಾರಿಗಳು)ರವರು ಸಂಬಂಧಪಟ್ಟ ಅಧಿಕರಿಗಳೊಂದಿಗೆ ಸಮನ್ವಯ ಸಾಧಿಸಿ ಸೂಕ್ತ ಕ್ರಮ ಕೈಗೊಳ್ಳಲಗುವುದೆಂದು ಸದಸ್ಯರಿಗೆ ಮತ್ತು ಕಾರ್ಯದರ್ಶಿಗಳಿಗೆ ವಿವರಿಸಿದರು.

ಮು.ಪು.ನೋ.

Scanned by CamScanner

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕರಿಗಳದ ಹೆಚ್.ಭೀಮೇಶ್, ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಸದಸ್ಯ ಕಾರ್ಯದರ್ಶಿ ಹಾಗೂ**
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.38

ಪ್ರತಿಯನ್ನು,

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನಗೆ ಸಲ್ಲಿಸಿದೆ.
3. ವಲಯ ಆಯುಕ್ತರು ರಾಜರಾಜೇಶ್ವರಿನಗರವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು ರಾಜರಾಜೇಶ್ವರಿನಗರವಲಯ ರವರ ಅವಗಾಹನೆಗೆ ಸಲ್ಲಿಸಿದೆ.
5. ಅಧ್ಯಕ್ಷರು ಹಾಗೂ ನೋಡಲ್ ಅಧಿಕರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.

Scanned by CamScanner